ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

**ಆಯುಕ್ತರ ಕಛೇರಿ,ಹೊಸ ಸಾರ್ವಜನಿಕ ಕಟ್ಟಡಗಳು,ನೃಪತುಂಗ ರಸ್ತೆ, ಬೆಂಗಳೂರು-560001.**

**ಸಂಖ್ಯೆ:ಸಿ7(8)ಪ್ರಾ.ಶಿ.ಆ.ಆರ್.ಟಿ.ಇ. ದಾಖಲಾತಿ 473/2015-16** **ದಿನಾಂಕ: 12-02-2016**

**: : ಸುತ್ತೋಲೆ : :**

ವಿಷಯ: ಶಿಕ್ಷಣ ಹಕ್ಕು ಕಾಯಿದೆ-2009 ರ ಸೆಕ್ಷನ್ 12(1)(ಸಿ) ಅಡಿ 2016-17 ನೇ ಸಾಲಿನ ಪ್ರವೇಶ ಪ್ರಕ್ರಿಯೆ ಕುರಿತು.

ಉಲ್ಲೇಖ: 1. ಉಚಿತ ಮತ್ತು ಕಡ್ಡಾಯ ಶಿಕ್ಷಣ ಮಕ್ಕಳ ಹಕ್ಕು ಕಾಯಿದೆ-2009
2. ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ನಿಯಮಗಳು-2012
3. ಸರ್ಕಾರದ ಆದೇಶ ಸಂಖ್ಯೆ: ಇಡಿ 51 ಪಿಜಿಸಿ 2016 ದಿನಾಂಕ: 08.02.2016
4. ಈ ಕಾರ್ಯಾಲಯದ ಪತ್ರದ ಸಮಸಂಖ್ಯೆ ದಿನಾಂಕ: 02.02.2016. ಮತ್ತು 06.02.2016

**********

2016-17 ನೇ ಸಾಲಿಗೆ ಶಿಕ್ಷಣ ಹಕ್ಕು ಕಾಯಿದೆಯ ಸೆಕ್ಷನ್ 12(1)(ಸಿ) ಅಡಿ ಪ್ರವೇಶ ಪ್ರಕ್ರಿಯೆಗೆ ಸಂಬಂಧಿಸಿದಂತೆ ದಿನಾಂಕ: 08.02.2016 ರ ಸರ್ಕಾರಿ ಆದೇಶದ ಪ್ರತಿ ಹಾಗೂ ವೇಳಾಪಟ್ಟಿಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಸರ್ಕಾರಿ ಆದೇಶದ ಸೂಚನೆಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸತಕ್ಕದ್ದು.

ಎಲ್.ಕೆ.ಜಿ ತರಗತಿಗೆ ಪ್ರವೇಶ ನೀಡದಂತೆ ಉಚ್ಚನ್ಯಾಯಾಲಯದ ದಾವೆ ಸಂಖ್ಯೆ: **W.P.No.58873/2015** ರಲ್ಲಿ ನೀಡಿದ್ದ ತಡೆಯಾಜ್ಞೆಯನ್ನು ಗೌರವಾನ್ವಿತ ಉಚ್ಚ ನ್ಯಾಯಾಲಯವು ದಿನಾಂಕ: 18.01.2016 ರಂದು ತೆರವುಗೊಳಿಸಿದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ಉಚ್ಚ ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟು** ಅಲ್ಪಸಂಖ್ಯಾತವಲ್ಲದ ಅನುದಾನ ರಹಿತ ಶಾಲೆಗಳಲ್ಲಿ ಅಧಿಕೃತ ಅನುಮತಿ ಪಡೆದಿರುವ ಪ್ರಾರಂಭಿಕ ತರಗತಿಯಾದ ಎಲ್.ಕೆ.ಜಿ ಅಥವಾ 1 ನೇ ತರಗತಿಯನ್ನು ಆರ್.ಟಿ.ಇ ಅಡಿ ಪ್ರವೇಶಕ್ಕೆ ಪರಿಗಣಿಸತಕ್ಕದ್ದು.

**1. ವಯೋಮಿತಿ:-**

ಅ. ಶೈಕ್ಷಣಿಕ ವರ್ಷದ ಪ್ರಾರಂಭದ ದಿನವಾದ ಜೂನ್ 1 ರಲ್ಲಿದ್ದಂತೆ ಎಲ್.ಕೆ.ಜಿ ತರಗತಿಗೆ 3 ವರ್ಷ 10 ತಿಂಗಳಿನಿಂದ 4 ವರ್ಷ 10 ತಿಂಗಳು.

ಆ. 1ನೇ ತರಗತಿಗೆ 5 ವರ್ಷ 10 ತಿಂಗಳಿನಿಂದ 6 ವರ್ಷ 10 ತಿಂಗಳು ವಯೋಮಿತಿಯನ್ನು ನಿಗಧಿಪಡಿಸಲಾಗಿದೆ.

ಇ. 2016-17 ನೇ ಸಾಲಿನಲ್ಲಿ ಸೆಕ್ಷನ್ 12(1)(ಸಿ) ಅಡಿ ಪ್ರವೇಶ ಪ್ರಕ್ರಿಯೆಗೆ ವಯೋಮಿತಿಯನ್ನು ದಿನಾಂಕ: 08.02.2016 ರ ಸರ್ಕಾರಿ ಆದೇಶದಲ್ಲಿ ನಿಗಧಿಪಡಿಸಿರುವಂತೆ ಕಡ್ಡಾಯವಾಗಿ ಅನುಷ್ಠಾನಗೊಳಿಸತಕ್ಕದ್ದು.

**2. ನೆರೆಹೊರೆ:-**

- ನೆರೆಹೊರೆಗೆ ಸಂಬಂಧಿಸಿದಂತೆ ಕರ್ನಾಟಕ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ನಿಯಮಗಳು-2012 ರ ನಿಯಮ 4 ರಲ್ಲಿ ನಿರ್ದಿಷ್ಟಪಡಿಸಿರುವಂತೆ ಗ್ರಾಮೀಣ ಪ್ರದೇಶದಲ್ಲಿ ಗ್ರಾಮ/ಜನವಸತಿ ಪ್ರದೇಶದಿಂದ 1 ರಿಂದ 5ನೇ ತರಗತಿವರೆಗೆ ಮತ್ತು ನಗರ ಪ್ರದೇಶದಲ್ಲಿ ಸ್ಥಳೀಯ ಪ್ರಾಧಿಕಾರದ ಆಡಳಿತಕ್ಕಾಗಿ ಅಧಿಸೂಚಿಸಿದ ವಾರ್ಡ್

ವ್ಯಾಪ್ತಿಯೊಳಗಿನ ಪ್ರದೇಶವನ್ನು **ನೆರೆಹೊರೆ** ಎಂದು ಪರಿಗಣಿಸಲಾಗಿದೆ. ನಗರ ಪ್ರದೇಶದಲ್ಲಿ 1 ಕಿಲೋ ಮೀಟರ್ ಅಂತರ ಅನ್ವಯವಾಗುವುದಿಲ್ಲ. ನೆರೆಹೊರೆಯಲ್ಲಿ ವಾಸವಾಗಿರುವ ಪೋಷಕರು ಅವರ ನೆರೆಹೊರೆಯಲ್ಲಿರುವ ಗರಿಷ್ಠ 5 ಶಾಲೆಗಳಿಗೆ ಮಾತ್ರ ಆದ್ಯತೆ ನೀಡಿ ಏಕ ಮಾತ್ರ ಅರ್ಜಿ ಸಲ್ಲಿಸಬಹುದು. ಒಂದಕ್ಕಿಂತ ಹೆಚ್ಚು ಅರ್ಜಿ ಸಲ್ಲಿಸಲು ಅವಕಾಶವಿಲ್ಲ.

- ನಗರ ಪ್ರದೇಶದಲ್ಲಿನ ವಾರ್ಡ್ ವ್ಯಾಪ್ತಿಯಲ್ಲಿ ಸರ್ಕಾರಿ, ಅನುದಾನಿತ, ಅಲ್ಪಸಂಖ್ಯಾತವಲ್ಲದ ಅನುದಾನರಹಿತ ಆರ್.ಟಿ.ಇ ಕೋಟಾದ ಶಾಲೆಯಿದ್ದಲ್ಲಿ ಸದರಿ ವಾರ್ಡ್‌ನಲ್ಲಿ ವಾಸವಿರುವ ಪೋಷಕರು ಅನುದಾನ ರಹಿತ ಶಾಲೆಯೂ ಸೇರಿದಂತೆ ಯಾವುದಾದರೂ ಶಾಲೆಗೆ ಅವರ ಮಕ್ಕಳಿಗೆ ಪ್ರವೇಶ ಪಡೆಯಬಹುದು.

- ಪೋಷಕರು ವಾಸವಿರುವ ವಾರ್ಡ್‌ನಲ್ಲಿ ಸರ್ಕಾರಿ ಅಥವಾ ಅನುದಾನಿತ ಶಾಲೆಯಿದ್ದಲ್ಲಿ ಅವರ ವಾರ್ಡ್ ವ್ಯಾಪ್ತಿಯ ಹೊರಗಿನ ಶಾಲೆಯಲ್ಲಿ ಆರ್.ಟಿ.ಇ ಕೋಟಾದಡಿ ಪ್ರವೇಶ ಕೋರುವಂತಿಲ್ಲ.

- ಪೋಷಕರು ವಾಸವಿರುವ ವಾರ್ಡ್‌ನಲ್ಲಿ ಯಾವುದೇ ಸರ್ಕಾರಿ ಅಥವಾ ಅನುದಾನಿತ ಶಾಲೆ ಇಲ್ಲದಿದ್ದಲ್ಲಿ ಮಾತ್ರ ಪಕ್ಕದ ವಾರ್ಡ್‌ನ ಅನುದಾನ ರಹಿತ ಶಾಲೆಯಲ್ಲಿ ಆರ್.ಟಿ.ಇ ಕೋಟಾದಡಿ ಪ್ರವೇಶ ಕೋರಿ ಅರ್ಜಿ ಸಲ್ಲಿಸಬಹುದು. ಇಂತಹ ಸಂದರ್ಭಗಳಲ್ಲಿ ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳು ನೆರೆಹೊರೆಯ ವ್ಯಾಪ್ತಿಯನ್ನು ನಿರ್ದಿಷ್ಟವಾಗಿ ಗುರುತಿಸಿ ಸಮೀಪದ ವಾರ್ಡ್‌ಗೆ ತಂತ್ರಾಂಶದಲ್ಲಿ ಮ್ಯಾಪ್ ಮಾಡತಕ್ಕದ್ದು.

3. **<u>ಆದಾಯ ದೃಢೀಕರಣ ಪತ್ರ :-</u>**

ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ಪ್ರವರ್ಗ-1 ಕ್ಕೆ ಸೇರದ ಪೋಷಕರು ಮಾತ್ರ ಆದಾಯ ದೃಢೀಕರಣ ಪತ್ರ ಸಲ್ಲಿಸುವುದು.

4. **<u>ಜಾತಿ ದೃಢೀಕರಣ ಪತ್ರ:-</u>**

ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ಪ್ರವರ್ಗ-1 ರ ಪೋಷಕರು ಜಾತಿ ಪ್ರಮಾಣ ಪತ್ರ ಸಲ್ಲಿಸುವುದು.

5. **<u>ವಿಳಾಸದ ದಾಖಲೆ:-</u>**

- ನೆರೆಹೊರೆಯಲ್ಲಿ ವಾಸವಿರುವುದನ್ನು ದೃಢೀಕರಿಸಲು ಪೋಷಕರು ಮತದಾರರ ಗುರುತಿನ ಚೀಟಿ (EPIC CARD), ಅಥವಾ ಆಧಾರ್ ಕಾರ್ಡ್ (AADHAR CARD) ಅಥವಾ, ಆಧಾರ್ ಕಾರ್ಡ್ ಪಡೆಯಲು ಸಲ್ಲಿಸಿರುವ (AADHAR CARD Acknowledgement slip ) ಸ್ವೀಕೃತಿಯನ್ನು ಸಲ್ಲಿಸುವುದು. ವಾಸಸ್ಥಳ ದೃಢೀಕರಣಕ್ಕೆ ಬೇರೆ ಯಾವುದೇ ದಾಖಲೆಗಳನ್ನು ಒಪ್ಪಿಕೊಳ್ಳತಕ್ಕದ್ದಲ್ಲ. ಮೇಲ್ಕಾಣಿಸಿದ ದಾಖಲೆಗಳಲ್ಲಿ ನಮೂದಿಸಿರುವ ವಿಳಾಸವನ್ನು ಪೋಷಕರು ಯಥಾವತ್ತಾಗಿ ಆನ್-ಲೈನ್ ಅರ್ಜಿಯಲ್ಲಿ ನಮೂದಿಸುವುದು.

- ಆದಾಯ ದೃಢೀಕರಣ ಪತ್ರ ಅಥವಾ ಜಾತಿ ಪ್ರಮಾಣ ಪತ್ರದ ಪ್ರತಿಗಳನ್ನು ಪೋಷಕರು ಆನ್-ಲೈನ್ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುವ ಬದಲು ಆನ್-ಲೈನ್ ಅರ್ಜಿ ನಮೂನೆಯಲ್ಲಿ ಸದರಿ ದೃಢೀಕರಣ ಪತ್ರದ ನೋಂದಣಿ ಕ್ರಮ ಸಂಖ್ಯೆಯನ್ನು ನಿಖರವಾಗಿ ನಮೂದಿಸುವುದು.

❖ ಪೋಷಕರು ಸಲ್ಲಿಸಿದ ಮಾಹಿತಿ ಸರಿಯಾಗಿ ಇರದಿದ್ದಲ್ಲಿ, ತಂತ್ರಾಂಶದ ಮೂಲಕ ಬ್ಯಾಚ್‌ಮೋಡ್ ಪರಿಶೀಲನೆಯಲ್ಲಿ ಕಂಡುಬಂದರೆ, ಸದರಿ ತಪ್ಪನ್ನು ಆನ್-ಲೈನ್ ತಂತ್ರಾಂಶದಲ್ಲಿ ಸರಿಪಡಿಸಲು ಸಂಬಂಧಿಸಿದ ಪೋಷಕರ ಮೊಬೈಲ್ ಸಂಖ್ಯೆಗೆ ಎಸ್.ಎಂ.ಎಸ್ ಕಳುಹಿಸಲಾಗುವುದು.

❖ ದಿನಾಂಕ: 18.03.2013 ರ ಸರ್ಕಾರಿ ಆದೇಶದಲ್ಲಿ ವ್ಯಾಖ್ಯಾನಿಸಿದ ಅನಾನುಕೂಲ ಪರಿಸ್ಥಿತಿಯಲ್ಲಿರುವ ಮಕ್ಕಳ ಗುಂಪಿನ ಜೊತೆಗೆ ದಿನಾಂಕ: 08.02.2016ರ ಸರ್ಕಾರದ ಆದೇಶದಲ್ಲಿ ಮಂಗಳಮುಖಿ ಮಗುವಿನ ಸೇರ್ಪಡೆ ಮಾಡಲಾಗಿದೆ.

❖ ಅನಾನುಕೂಲ ಪರಿಸ್ಥಿತಿಯಲ್ಲಿರುವ ಗುಂಪುಗಳಿಗೆ ಸೇರಿಲ್ಲದ, ಕರ್ನಾಟಕದಲ್ಲಿ ವಾಸವಾಗಿರುವ ಬೇರೆ ಯಾವುದೇ ಜಾತಿಯ ಕುಟುಂಬಗಳ ವಾರ್ಷಿಕ ಆದಾಯ 3.5 ಲಕ್ಷಕ್ಕಿಂತ ಕಡಿಮೆ ಇದ್ದಲ್ಲಿ ದುರ್ಬಲ ವರ್ಗದ ಮಕ್ಕಳು ಎಂದು ಸರ್ಕಾರ ಅಧಿಸೂಚಿಸಿದೆ.

**6. ಆಯ್ಕೆ ಪ್ರಕ್ರಿಯೆ:**

❖ ಆರ್.ಟಿ.ಇ. ಅಡಿ ಪ್ರವೇಶ ನೀಡಬೇಕಾದ ಶಾಲೆಗಳಲ್ಲಿ ದಿನಾಂಕ: 30.09.2015ರಲ್ಲಿದ್ದಂತೆ ಪ್ರಾರಂಭಿಕ ತರಗತಿಯ ಒಟ್ಟು ಮಕ್ಕಳ ಸಂಖ್ಯೆಯನ್ನು ಸಾಫ್ಟ್‌ವೇರ್ ಡೆವಲಪ್‌ಮೆಂಟ್ ಸೆಂಟರ್ ನೀಡಿರುವ ನಮೂನೆಯಂತೆ ತಂತ್ರಾಂಶದಲ್ಲಿ ಅಪ್‌ಡೇಟ್ ಮಾಡುವುದು. ಆರ್.ಟಿ.ಇ ಅಡಿ ಪ್ರವೇಶ ನೀಡಬೇಕಾದ ಶಾಲೆಗಳ ಪಟ್ಟಿ ಹಾಗೂ ಆರ್.ಟಿ.ಇ. ಅಡಿ ಪ್ರಾರಂಭಿಕ ತರಗತಿಗೆ ದಾಖಲು ಮಾಡಿಕೊಳ್ಳಬೇಕಾದ ಸೀಟುಗಳ ಸಂಖ್ಯೆಯನ್ನು ಸಹ ಸಾಫ್ಟ್‌ವೇರ್‌ಡೆವಲಪ್‌ಮೆಂಟ್ ಸೆಂಟರ್ ನೀಡಿರುವ ನಮೂನೆಯಲ್ಲಿ ನಮೂದಿಸುವುದು. ಅಲ್ಲದೇ ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಣಾಧಿಕಾರಿರವರಿಂದ ಅನುಮೋದನೆ ಪಡೆದು ಜಿಲ್ಲಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.

❖ ಆಸಕ್ತ ಪೋಷಕರು ತಮ್ಮ ನೆರೆಹೊರೆಯ ಶಾಲೆಗೆ ಪ್ರವೇಶ ಕೋರಿ ಆನ್-ಲೈನ್ (ON-LINE)ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಲು ಆಯಾ ಕ್ಷೇತ್ರಶಿಕ್ಷಣಾಧಿಕಾರಿಗಳು ಹಾಗೂ ಉಪನಿರ್ದೇಶಕರು ತಮ್ಮ ವ್ಯಾಪ್ತಿಯಲ್ಲಿ ವ್ಯಾಪಕ ಪ್ರಚಾರ ನೀಡುವುದು. ಜಿಲ್ಲಾ/ತಾಲ್ಲೂಕು ಆಡಳಿತ ವ್ಯಾಪ್ತಿಯ ಎಲ್ಲಾ ಖಾಸಗಿ ಶಾಲೆಗಳ ಮುಖ್ಯಸ್ಥರ ಸಭೆ ನಡೆಸಿ, ಆರ್.ಟಿ.ಇ ಅಡಿ ಪ್ರವೇಶ ಪ್ರಕ್ರಿಯೆ ಬಗ್ಗೆ ನಿಗಧಿಪಡಿಸಿರುವ ವೇಳಾಪಟ್ಟಿ ಪ್ರಕಾರ ಸಕಾಲಿಕ ಕ್ರಮ ತೆಗೆದುಕೊಳ್ಳಲು ಪತ್ರ ಕಳುಹಿಸಿಕೊಡುವುದು.

❖ ಅಂತರ್ಜಾಲ ಸೌಲಭ್ಯ ಲಭ್ಯವಿಲ್ಲದ ಕುಟುಂಬಗಳ ಪೋಷಕರು ಆನ್-ಲೈನ್(ONLINE) ಮೂಲಕ ಅರ್ಜಿ ಸಲ್ಲಿಸಲು ಸಂಬಂಧಿಸಿದ ಶಾಲೆ ಅಥವಾ ಕ್ಷೇತ್ರಶಿಕ್ಷಣಾಧಿಕಾರಿಗಳ ಕಾರ್ಯಾಲಯವು ಅನುಕೂಲ ಕಲ್ಪಿಸತಕ್ಕದ್ದು.

❖ ಅಪೂರ್ಣ ಅಥವಾ ಕ್ರಮಬದ್ಧವಾದ ಅರ್ಜಿಗಳ ತಪ್ಪುಗಳನ್ನು ಸರಿಪಡಿಸಲು ಸಂಬಂಧಿಸಿದ ಪೋಷಕರ ಮೊಬೈಲ್ ಸಂಖ್ಯೆಗೆ ಎಸ್.ಎಂ.ಎಸ್. ಸಂದೇಶ ಕಳುಹಿಸಲಾಗುವುದು. ಈ ಹಂತದಲ್ಲಿ ಪೋಷಕರು ನೀಡುವ ದಾಖಲೆಗಳ ಆಧಾರದಲ್ಲಿ ಅರ್ಜಿಗಳಲ್ಲಿನ ತಪ್ಪುಗಳನ್ನು ತಂತ್ರಾಂಶದಲ್ಲಿ ಸರಿಪಡಿಸುವ ಜವಾಬ್ದಾರಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಮರ್ಪಕವಾಗಿ ನಿರ್ವಹಿಸತಕ್ಕದ್ದು.

❖ ಈ ನಿಟ್ಟಿನಲ್ಲಿ ತಮ್ಮ ಜಿಲ್ಲಾ ಆಡಳಿತ ವ್ಯಾಪ್ತಿಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಉಪನಿರ್ದೇಶಕರುಗಳು ಹಾಗೂ ಎಲ್ಲಾ ಖಾಸಗಿ ಶಾಲೆಗಳ ಮುಖ್ಯಸ್ಥರು ವೈಯಕ್ತಿಕ ಗಮನ ನೀಡಿ ವೇಳಾಪಟ್ಟಿಯಲ್ಲಿರುವಂತೆ ತುರ್ತು ಕ್ರಮ ತೆಗೆದುಕೊಳ್ಳಲು ನಿರ್ದೇಶನ ನೀಡತಕ್ಕದ್ದು.

ದಿನಾಂಕ: 08.02.2016ರ ಸರ್ಕಾರದ ಆದೇಶಕ್ಕೆ ವಿರುದ್ಧವಾದ ಹಿಂದಿನ ಆದೇಶಗಳು ಅಕೃತ ಮತ್ತು ಶೂನ್ಯ ಆಗುವುದರಿಂದ ಆದೇಶದ ಸೂಚನೆಗಳನ್ನು ಯಾವುದೇ ಗೊಂದಲಗಳಿಗೆ ಅವಕಾಶವಿಲ್ಲದಂತೆ ಕಟ್ಟುನಿಟ್ಟಾಗಿ ಪಾಲಿಸಲು ಈ ಮೂಲಕ ಸೂಚಿಸಲಾಗಿದೆ.

12/2/16

(ಕೆ.ಎಸ್. ಸತ್ಯಮೂರ್ತಿ)
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ

ರವರಿಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಇವರಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ತಾಲ್ಲೂಕು/ವಲಯಗಳ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.

ಪ್ರತಿಯನ್ನು:

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಗೌರವ ಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರ್ಗಿ ಮತ್ತು ಧಾರವಾಡ ಇವರಿಗೆ ಮಾಹಿತಿಗಾಗಿ.
3. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ಇವರ ಮಾಹಿತಿಗಾಗಿ.
4. ನಿರ್ದೇಶಕರು, (ಪ್ರೌಢಶಿಕ್ಷಣ)/ ಡಿ.ಎಸ್.ಇ.ಆರ್.ಟಿ./ ಎಸ್.ಎಸ್.ಎ./ಆರ್.ಎಂ.ಎಸ್.ಎ/ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ ರವರ ಮಾಹಿತಿಗಾಗಿ.
5. ನಿರ್ದೇಶಕರು,(ಪ್ರಾಥಮಿಕ/ಪ್ರೌಢಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರ್ಗಿ ಮತ್ತು ಧಾರವಾಡ ಇವರ ಮಾಹಿತಿಗಾಗಿ.
6. ಹಿರಿಯ ಸಹಾಯಕ ನಿರ್ದೇಶಕರು/ ಸಹಾಯಕ ನಿರ್ದೇಶಕರು, ಇ-ಆಡಳಿತ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
7. ಪ್ರೋಗ್ರಾಮರ್, ಸಾಫ್ಟ್‌ವೇರ್ ಡೆವಲಪ್‌ಮೆಂಟ್ ಸೆಂಟರ್, ಇ-ಆಡಳಿತ ವಿಭಾಗ ಇವರ ಮಾಹಿತಿಗಾಗಿ.
8. ಕಛೇರಿ ಪ್ರತಿ.